
# ಶಾಂತಿಧಾಮ – ೧

❖ ಮೂಲ: ಸ್ವಾಮಿ ಭಜನಾನಂದ   ಅನುವಾದ: ಡಾ.ಸಿ.ಪಿ.ಕೃಷ್ಣಕುಮಾರ್

**ಶಾಂ**ತಿಧಾಮ—ಇದು ನನ್ನ ಮೇಲೆ ಬೆಂಗಳೂರಿನ ಶ್ರೀರಾಮಕೃಷ್ಣ ಆಶ್ರಮ (ಈಗಿನ ರಾಮಕೃಷ್ಣ ಮಠ) ಮೂಡಿಸಿದ ಪ್ರಪ್ರಥಮ ಮತ್ತು ಶಾಶ್ವತ ಪ್ರಭಾವಮುದ್ರೆ. ನಲವತ್ತು ಮೂರು ವರ್ಷಗಳ ಹಿಂದೆ ಈ ಶಾಂತಿ ಧಾಮದ ಪಾವನ ಆವರಣದೊಳಗೆ ಕಾಲಿಟ್ಟಾಗಿನ ನನ್ನ ಮೊದಲ ಅನುಭವದ ನೆನಪು ನನ್ನ ಮನಸ್ಸಿನಲ್ಲಿ ಈಗಲೂ ಹೊಸದಾಗಿ ಮತ್ತು ಕಣ್ಣಿಗೆ ಕಟ್ಟಿದಂತೆ ಉಳಿದಿದೆ. ಮದ್ರಾಸ್ ರೈಲಿನ ಕಿಕ್ಕಿರಿದ ಬೋಗಿಯೊಂದ ರಲ್ಲಿ ಮಾಡಿದ ಆಯಾಸಪೂರ್ಣ ರಾತ್ರಿ ಪ್ರಯಾಣದ ಬಳಿಕ ನಾನು ಬೆಳಗ್ಗೆ ಸುಮಾರು ೭.೩೦ ಗಂಟೆಗೆ ಆಶ್ರಮವನ್ನು ತಲುಪಿದ್ದೆ. ಎಲ್ಲ ಸಂನ್ಯಾಸಿ ಸೋದರರೂ ಬೆಳಗಿನ ಉಪಾಹಾರಕ್ಕಾಗಿ ದೇವಾಲಯದ ಹಿಂದಿನ ಅಡುಗೆಮನೆ ವಿಭಾಗಕ್ಕೆ ಹೋಗಿದ್ದರು. ರಾಮಕೃಷ್ಣ ಶತಮಾನೋತ್ಸವ ಭವನದ ಮುಂದೆ ನಾನೊಬ್ಬನೇ ನಿಂತೆ. ಇಡೀ ಸ್ಥಳ ಮರಗಳಿಂದ ತುಂಬಿತ್ತು; ಅನಂತವನ್ನು ದಿಟ್ಟಿಸುವ ಜೀವಾತ್ಮನನ್ನು ಸಂಕೇತಿಸುತ್ತಾ, ನೀಲಾಕಾಶವನ್ನು ನಿರ್ದೇಶಿಸುವ ಸುವರ್ಣ ಶಿಖರದಿಂದ ಕೂಡಿದ ದೇವಾಲಯದ ಹಳದಿ ಗುಮ್ಮಟವನ್ನು ಮರಗಳ ಮೇಲಿನಿಂದ ಕಾಣಬಹುದಿತ್ತು. "ಶ್ರೀಮಾತೆಯ ಶಿಲೆ"ಯವರೆಗೆ ವಿಸ್ತರಿಸಿದ್ದ ಹುಲುಸಾದ ಹಸಿರು ಹುಲ್ಲಿನ ವಿಶಾಲವಾದ ಹಾಸು ನನ್ನ ಮುಂದಿತ್ತು. ಹೊಳೆಯುವ ಮಂಜಿನ ಮೂಲಕ ಸೂರ್ಯನ ಹೊಂಗಿರಣಗಳು ಪಸರಿಸುತ್ತಿದ್ದುವು; ಹುಲ್ಲುಹಾಸಿನ ಮೇಲೆ ಜೇಡಬಲೆಯ ಮುಸುಕಿನಲ್ಲಿ ಸೆರೆಯಾದ ಇಬ್ಬನಿಗಳು ಸಾವಿರಾರು ಪುಟ್ಟ ವಜ್ರಗಳಂತೆ ಮಿನುಗುತ್ತಿದ್ದುವು; ಗಾಳಿ ತಂಪಾಗಿತ್ತು, ಸ್ತಬ್ಧವಾಗಿತ್ತು; ಗಾಢ ಮೌನ ದೃಶ್ಯವನ್ನು ಕವಿದಿತ್ತು. ಇಡೀ ಪ್ರಕೃತಿ ಧ್ಯಾನಸ್ಥವಾದಂತಿತ್ತು. ಅನೇಕ ವರ್ಷಗಳ ನಂತರ ಛಾಂದೋಗ್ಯ ಉಪನಿಷತ್ತಿನಲ್ಲಿ (೭.೬.೧) ನಾನು ಓದಿದೆ: **ಧ್ಯಾಯತೀವ ಪೃಥ್ವೀ, ಧ್ಯಾಯತೀವಾಂತರಿಕ್ಷಂ, ಧ್ಯಾಯತೀವ ದ್ಯೌಃ, ಧ್ಯಾಯಂತೀವಾಪೋ, ಧ್ಯಾಯಂತೀವ ಪರ್ವತಾ...** ('ಭೂಮಿ ಧ್ಯಾನ ಮಾಡುವಂತೆ ತೋರುತ್ತಿದೆ, ವಾತಾವರಣ ಧ್ಯಾನ ಮಾಡುವಂತೆ ತೋರುತ್ತಿದೆ, ಆಕಾಶ ಧ್ಯಾನ ಮಾಡುವಂತೆ ತೋರುತ್ತಿದೆ, ನೀರು ಧ್ಯಾನ ಮಾಡು ವಂತೆ ತೋರುತ್ತಿದೆ, ಪರ್ವತಗಳು ಧ್ಯಾನ ಮಾಡುವಂತೆ ತೋರುತ್ತಿವೆ.. ")



ಸುತ್ತಲೂ ಶಾಂತಿಯಿತ್ತು; ಅದಕ್ಕಿಂತ ಮಿಗಿಲಾಗಿ, ನನ್ನ ಆತ್ಮದಲ್ಲಿ ಶಾಂತಿಯಿತ್ತು. ಮಠವನ್ನು ಸೇರಲು ನಾನು ಮೂರು ವರ್ಷಗಳಿಗಿಂತ ಹೆಚ್ಚು ಕಾಲ ಹೋರಾಡಿದ್ದೆ; ಈಗ, ಕಾತರ, ವ್ಯಥೆಗಳ ಆ ದಿನಗಳು ಮುಗಿದಿದ್ದುವು. ಕಡೆಗೂ ನಾನು ನನ್ನ ಮನೆಯನ್ನು, ಶಾಂತಿಧಾಮವನ್ನು ಮುಟ್ಟಿದ್ದೇನೆ!

ನನ್ನ ಆಲೋಚನಾಮಗ್ನತೆ ಹೆಚ್ಚು ಹೊತ್ತಿರಲಿಲ್ಲ. ಏಕೆಂದರೆ, ಕಾವಿ ವಸ್ತ್ರಧಾರಿ ಸಂನ್ಯಾಸಿಯೊಬ್ಬರ ನೇತೃತ್ವದಲ್ಲಿ ಶ್ವೇತವಸನ ಧಾರಿಗಳಾದ ಬ್ರಹ್ಮಚಾರಿಗಳ ಸಣ್ಣ ಸಾಲೊಂದು ಬೇಗ ನನ್ನತ್ತ ಬರುತ್ತಿರುವುದು ಕಾಣಿಸಿತು. ತಮ್ಮ ವಯಸ್ಸಿಗೆ ಚಿಕ್ಕವರಾಗಿ ತೋರುತ್ತಿದ್ದ ಸಂನ್ಯಾಸಿ ಮಹಾಶಯರಲ್ಲಿ ನಿಶ್ಶಬ್ದ ಘನತೆಯ ಲಕ್ಷಣವಿತ್ತು; ಅವರಿಗೆ ತಮ್ಮ ಮೇಲೆ ಮತ್ತು ಪರಿಸರದ ಮೇಲೆ ಹಿಡಿತವಿದ್ದುದನ್ನು ಅದು ತೋರ್ಪಡಿಸಿತು; ಅವರ ನಗುಮುಖ ಮೇಧಾಶಕ್ತಿಯನ್ನೂ, ಶಿಸ್ತನ್ನೂ ಹೊರಸೂಸುತ್ತಿತ್ತು. ಆಮೇಲೆ ನನಗೆ ತಿಳಿದುಬಂದಂತೆ, ಅವರು ಮತ್ತಾರೂ ಆಗಿರದೆ ಪೂಜ್ಯ ಸ್ವಾಮಿ ಶಾಸ್ತ್ರಾನಂದಜಿ ಮಹಾರಾಜ್ ಆಗಿದ್ದರು; ಅವರೀಗ ಭೌತಿಕ ಜಗತ್ತಿನಲ್ಲಿ ನಮ್ಮೊಡನಿಲ್ಲ ಎಂಬುದು ವಿಷಾದಕರ. ಬ್ರಹ್ಮಚಾರಿಗಳೆಲ್ಲ ಮುಂದೆ ತದ್ರೂಪಾನಂದಜಿ, ಪುರುಷೋತ್ತಮಾನಂದಜಿ ಮತ್ತು ಜಗದಾತ್ಮಾನಂದಜಿ ಎಂಬ ಪ್ರಸಿದ್ಧ ಹೆಸರುಗಳಲ್ಲಿ ರಾಮಕೃಷ್ಣ ಮಠದ ಕೀರ್ತಿಶಾಲಿ ಸದಸ್ಯರಾಗಲಿದ್ದರು. ನನ್ನನ್ನು ತಾವು ನಿರೀಕ್ಷಿಸುತ್ತಿದ್ದುದಾಗಿ ಅವರು ಹೇಳಿ, ನನಗೆ ಹಾರ್ದಿಕ ಸ್ವಾಗತ ನೀಡಿದರು. ಶಾಸ್ತ್ರಾನಂದಜಿ ಮಹಾರಾಜ್ ಅವರ ಸೂಚನೆಯ ಮೇರೆಗೆ ನನ್ನನ್ನು ಮಠದ



ಬೆಂಗಳೂರಿನಲ್ಲಿರುವ ರಾಮಕೃಷ್ಣ ಮಠವು ಶತಮಾನೋತ್ಸವವನ್ನು ಆಚರಿಸುತ್ತಿದೆ. ಈ ಮಠವನ್ನು ಸೇರಿದಾಗಿನ ದಿನಗಳನ್ನು ಸ್ಮರಿಸುವುದರೊಂದಿಗೆ ಸಂನ್ಯಾಸ ಜೀವನದ ಹಿರಿಮೆ, ಮಾಧುರತೆಗಳನ್ನು ಪರಿಚಯಿಸಿರುವ ಲೇಖಕರು ಬೇಲೂರು ಮಠದಲ್ಲಿ ರಾಮಕೃಷ್ಣ ಮಹಾಸಂಘದ ಸಹಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ವಸತಿಗೃಹಗಳಿಗೆ ಕರೆದೊಯ್ದು, ಪೂಜಾಮಂದಿರದ ಹಿಂದಿನ ಸಣ್ಣ ಕಮಾನುಗೂಡಿನಂಥ ಕೊಠಡಿಯೊಂದನ್ನು ಕೊಡಲಾಯಿತು. ಎಡಕ್ಕಿದ್ದ ಅಂಥದೇ ಕೊಠಡಿಯೊಂದರಲ್ಲಿ, ಆಮೇಲಿನ ಕೆಲವು ತಿಂಗಳ ಕಾಲ ನನ್ನ 'ಮಿತ್ರ, ತತ್ತ್ವಜ್ಞಾನಿ, ಮಾರ್ಗದರ್ಶಿ' ಯಾಗಲಿದ್ದ ಶ್ರೀ ಗೋಪಾಲರಾಯರಿದ್ದರು. ಅಂದು ಮಧ್ಯಾಹ್ನದ ಊಟವಾದ ಮೇಲೆ, ಸಂಪೂರ್ಣ ಹೊಸತಾದ ನನ್ನ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತ ಕೊಠಡಿಯಲ್ಲಿ ಒಬ್ಬನೇ ಕುಳಿತಿದ್ದೆ. ಸುಮಾರು ೩ ಗಂಟೆಯ ಹೊತ್ತಿಗೆ ಸಾಮೂಹಿಕ ಪಠಣದ ಮೃದುವಾದ ನಾದದ ಅಲೆ ಒಳಹರಿಯತೊಡಗಿತು. ನಾನು ಕೊಠಡಿಯಿಂದ ಹೊರಬಿದ್ದು ಪಠಣ ನಡೆಯುತ್ತಿದ್ದ ಕಡೆಗೆ ನಡೆದೆ. "ಶ್ರೀಮಾತೆಯ ಶಿಲೆ" ಇರುವ ಪ್ರದೇಶದ ಒಂದು ಮೂಲೆಗೆ ಹೋಗಿ, ಒಂದು ಮರದ ಕೆಳಗೆ ಕುಳಿತಿದ್ದ ಪುಟ್ಟ ಬಾಲಕರ ಒಂದು ಗುಂಪನ್ನೂ, ಅವರಿಗೆ 'ಪುರುಷಸೂಕ್ತ'ವನ್ನು ಕಲಿಸುತ್ತಿದ್ದ ಒಬ್ಬ ಯುವಕನನ್ನೂ—ಆಮೇಲೆ ನಾನು ಅರಿತುಕೊಂಡಂತೆ, ಅವರ ಹೆಸರು ಸೋಮಸುಂದರಂ—ಕಂಡೆ. ಅಪರಿಚಿತನೊಬ್ಬನ ಅನಿರೀಕ್ಷಿತ ಪ್ರವೇಶದಿಂದ ಅವರಿಗೆ ಮುಜುಗರವುಂಟಾಯಿತು; ಆದ್ದರಿಂದ ನಾನು ಹಿಮ್ಮೆಟ್ಟಿದೆನಾದರೂ ಪಠಣಕ್ಕೆ ಕಿವಿಗೊಡುತ್ತ, ಅವರಿಗೆ ಗೋಚರಿಸದಂತೆ ತುಸು ದೂರದಲ್ಲಿ ಉಳಿದೆ. ನಾನು ಹಿಂದೆ ಕೇಳಿದ್ದ ದೇಗುಲದ ಅರ್ಚಕರ ರೂಕ್ಷ ಲೌಕಿಕ ಪಠಣಕ್ಕೆ ಹೋಲಿಸಿದಾಗ, ಇದು ಆತ್ಮಸಮ್ಮೋಹಕವಾಗಿತ್ತು. ನಾನು ಪುಸ್ತಕಗಳಲ್ಲಿ ಓದಿದ್ದ ಪ್ರಾಚೀನ ಭಾರತದ ವೈದಿಕ ಋಷಿಗಳ ಆಶ್ರಮಗಳಿಗೆ ನನ್ನ ಮನಸ್ಸು ಜಾರಿತು. ವೈದಿಕ ಆದರ್ಶವೊಂದು ಜೀವಂತ ವಾಸ್ತವವಾಗಿದ್ದಂಥ ಆಶ್ರಮವೊಂದಕ್ಕೆ ನಾನು ಬಂದಿದ್ದೇನೆ ಎನ್ನಿಸಿತು.

### ದೇವಮಂದಿರ

ಆಶ್ರಮಕಲ್ಪನೆಗೆ—ವೇದಕಾಲದಷ್ಟು ಹಿಂದಕ್ಕೆ ಹೋಗುವ ಧ್ಯಾನ ಪರಂಪರೆಯ ಅವಿಚ್ಛಿನ್ನ ಸರಣಿಯ ಒಂದು ಕೊಂಡಿಗೆ—ಹೊರತಾಗಿ, ನಾನು ಸೇರಿದ್ದ ಮಠದೊಡನೆ ನಾನು ಹೋಲಿಸಿಕೊಳ್ಳತೊಡಗಿದ ಮತ್ತೊಂದು ಕಲ್ಪನೆಯೆಂದರೆ, ದೇವಾಲಯ ಕಲ್ಪನೆ. ಕ್ಯಾಥೊಲಿಕ್ ಕ್ರೈಸ್ತ ಸಂನ್ಯಾಸಿಗಳು ಅನುಸರಿಸುವ ಎಲ್ಲ ನಿಯಮಗಳ ತಳಹದಿಯಾದ ಸಂತ ಬೆನೆಡಿಕ್ಟ್‌ನ ನಿಯಮದಲ್ಲಿ ಅರ್ಥವತ್ತಾದ ಹೇಳಿಕೆಯೊಂದಿದೆ: "ಮಠ ದೇವರ ಮನೆ." ಮಠವೆಂಬುದು ಸಂನ್ಯಾಸಿಗಳಿಗೊಂದು ವಸತಿಗೃಹ ಅಥವಾ ಭೋಜನಾಲಯವಲ್ಲ; ಅದು ಜೀವಂತ ಭಗವಂತನ ದೇಗುಲ. ರಾಮಕೃಷ್ಣ ಮಠ ಅಥವಾ ಆಶ್ರಮವೊಂದರ ಪೂಜಾಮಂದಿರದಲ್ಲಿ ಪೂಜೆಗೊಳ್ಳುವ ಶ್ರೀರಾಮಕೃಷ್ಣರು ಜನದೂರ ನಾಮಕಾವಾಸ್ಥೆಯ ನೇತಾರರ ಪ್ರತಿಮೆಯಷ್ಟೆ ಅಲ್ಲ; ಸಂನ್ಯಾಸಿ ಪರಿವಾರದ ಬದುಕಿನಲ್ಲಿನ ಸಜೀವ ಭಾಗಿ. ಇಡೀ ಸಮುದಾಯ ಅವರಲ್ಲಿ ಕೇಂದ್ರಿತವಾಗಿ, ಅವರ ಸುತ್ತ ಚಲಿಸುತ್ತದೆ. ಎಲ್ಲ ಚಟುವಟಿಕೆಗಳೂ ಅವರ ಹೆಸರಿನಲ್ಲಿ ಮೊದಲಾಗುತ್ತವೆ; ಎಲ್ಲ ಕರ್ಮಗಳ ಫಲಾನುಭವಿ ಅವರೇ. (**ಭೋಕ್ತಾರಂ ಯಜ್ಞತಪಸಾಂ**, ಗೀತಾ, ೫.೨೯). ಮಠದಲ್ಲಿ ಮುಖ್ಯವಾಗಿ ಪ್ರಭುವಿಗಾಗಿ ಅಡುಗೆ ಮಾಡಲಾಗುತ್ತದೆ; ಆಹಾರವನ್ನು ನಿವಾಸಿಗಳು ಪ್ರಸಾದವಾಗಿ ಸೇವಿಸುತ್ತಾರೆ. ಆಶ್ರಮದ ಕೃಷಿಭೂಮಿಯ ಎಲ್ಲ ಉತ್ಪನ್ನವನ್ನು ಮೊದಲು ಪ್ರಭುವಿಗೆ ಸಮರ್ಪಿಸಿ, ಅನಂತರ ಮಾರುಕಟ್ಟೆಗೆ ಕಳುಹಿಸಲಾಗುತ್ತದೆ. ಕೃಷಿಕಾರ್ಮಿಕರೂ ಈ ತತ್ತ್ವವನ್ನು ಗೌರವಿಸುತ್ತಿದ್ದರು; ಆಶ್ರಮದ ದ್ರಾಕ್ಷಿತೋಟದ ಹಣ್ಣುಗಳನ್ನು ಪೂಜಾಮಂದಿರದ ಪ್ರಭುವಿಗೆ ಅರ್ಪಿಸಲಾಗಿದೆಯೆಂಬುದನ್ನು ಖಚಿತಪಡಿಸಿಕೊಳ್ಳದೆ ಅವರು ಅವನ್ನು ಗುಟ್ಟಾಗಿ ತಿನ್ನುತ್ತಿರಲಿಲ್ಲವೆಂಬುದನ್ನು ನಾನು ಗಮನಿಸಿದೆ.

ದೇವಕೇಂದ್ರಿತ ಬದುಕನ್ನು ಬದುಕುವುದರಿಂದ ಮತ್ತು ಎಲ್ಲ ಕೆಲಸವನ್ನೂ ಪೂಜೆಯೆಂದು ಮಾಡುವುದರಿಂದ ಮಠದ ನಿವಾಸಿಗಳು ಕರ್ಮಯೋಗವನ್ನು ಸಹಜಮಾರ್ಗದಲ್ಲಿ ಕಲಿಯುತ್ತಾರೆ ಮತ್ತು ಭಗವತ್ ಸ್ಮೃತಿಯನ್ನು ಎಲ್ಲ ಕಾಲದಲ್ಲೂ ಬೆಳೆಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ; ಮಠದ ಇಡೀ ಜೀವನ ದೈವೀಕವಾಗುತ್ತದೆ. ಮಠಕ್ಕೆ ಸೇರುವ ಮುನ್ನ ಪೂಜ್ಯ ಸ್ವಾಮಿ ಯತೀಶ್ವರಾನಂದಜಿಯವರ 'ದಿವ್ಯಜೀವನ' (Divine Life) ಎಂಬ ಪುಟ್ಟ ಪುಸ್ತಕವನ್ನು ನಾನು ಅನೇಕ ಸಲ ಓದಿದ್ದೆ. ಮಠವನ್ನು ಸೇರಿದ ನಂತರ, ವ್ಯಾವಹಾರಿಕ ಜೀವನದಲ್ಲಿ ಆ ಮಾತಿನ ಅರ್ಥವೇನೆಂಬುದನ್ನು ನಾನು ಅರಿತುಕೊಳ್ಳತೊಡಗಿದೆ.

### ಜೀವನ ಪರಿವರ್ತನೆ

ಪೂಜೆಯಾಗಿ ಕಾಯಕ ಮೂರು ಉಪಸಿದ್ಧಾಂತಗಳನ್ನು ಧ್ವನಿಸುತ್ತದೆ:

೧. ಎಲ್ಲ ಕಾಯಕವೂ ಪವಿತ್ರ., ಅದರಲ್ಲಿ ಮೇಲು, ಕೀಳು ಎಂಬ ಭೇದವಿಲ್ಲ ಎಂಬುದು ಮೊದಲನೆಯ ಉಪಸಿದ್ಧಾಂತ. ನೆಲ ಗುಡಿಸುವುದನ್ನು ಅಥವಾ ರೋಗಿಯೊಬ್ಬನನ್ನು ಉಪಚರಿಸುವುದನ್ನು, ವೇದಿಕೆಯ ಅಲಂಕಾರ ಅಥವಾ ಪೂಜೆ ಮಾಡುವಾಗ ವಹಿಸುವಷ್ಟೇ ಎಚ್ಚರಿಕೆ ಮತ್ತು ಗೌರವದಿಂದ ಮಾಡಬೇಕು. ಇದಕ್ಕೆ ಶ್ರೀಮಾತೆಯ ಬದುಕು ಅತ್ಯುನ್ನತ ನಿದರ್ಶನವನ್ನೊದಗಿಸುತ್ತದೆ; ಪೂಜ್ಯ ಯತೀಶ್ವರಾನಂದಜಿ ಮಹಾರಾಜ್ ನಮಗಿದನ್ನು ಯಾವಾಗಲೂ ಬೇಸರವಿಲ್ಲದೆ ಸೂಚಿಸುತ್ತಿದ್ದರು.

೨. ಅತ್ಯುತ್ತಮವಾದುದನ್ನು ಮಾತ್ರ ಪ್ರಭುವಿಗೆ ಅರ್ಪಿಸುವುದರಿಂದ, ಎಲ್ಲ ಕಾಯಕವನ್ನೂ ಸಾಧ್ಯವಾದಷ್ಟು ಅತ್ಯುತ್ತಮವಾಗಿ ಮಾಡಬೇಕು. ಮಠದಲ್ಲಿನ ಎಲ್ಲವೂ

ಪ್ರಭುವಿಗೆ ಸೇರಿದ್ದರಿಂದ, ಸಾಮಗ್ರಿಗಳ ಪೋಲು, ಹಾನಿ ಅಥವಾ ನಷ್ಟ ಆಗದಂತೆ ಎಲ್ಲವನ್ನೂ ಅತ್ಯಂತ ದಕ್ಷ ಹಾಗೂ ಮಿತವ್ಯಯಯುತ ರೀತಿಯಲ್ಲಿ ನಿರ್ವಹಿಸಬೇಕು. ತಪ್ಪು ಮಾಡದೆ ಈ ತತ್ತ್ವವನ್ನು ಅನುಸರಿಸುವುದು ಹೊಸಬರಿಗೆ ಕಷ್ಟ. ತಪ್ಪುಗಳಿಗೆ ಸಾಕಷ್ಟು ಗದರಿಕೆ ಮತ್ತು ಕಟು ತಿದ್ದುಪಡಿಗಳ ಬಹುಮಾನ ಖಚಿತ. ಇವು ಕಿಂಚಿತ್ತೂ ಸಹಾನುಭೂತಿ, ದಯೆಗಳಿಲ್ಲದೆ ಹಿರಿಯ ಯತಿಗಳಿಂದ ಕೂಡಲೇ ಸಿಗುತ್ತವೆ. ಇಂತಹ ಗದರಿಕೆ ಮತ್ತು ತಿದ್ದುಪಡಿಗಳು ನನ್ನ ಆಂತರಿಕ ವಿಕಾಸ, ಪರಿಪಾಕಗಳಿಗೆ ಮತ್ತು ಮನಸ್ಸನ್ನು ಭಗವಂತನೆಡೆಗೆ ಇನ್ನಷ್ಟು ತಿರುಗಿಸುವುದಕ್ಕೆ ಅಗತ್ಯವಾಗಿದ್ದುವು ಎಂಬುದು ಹೊಸಬನಾಗಿದ್ದರೂ ನನಗೆ ಅರ್ಥವಾಯಿತು.

೩. ಪೂಜೆಯಾಗಿ ಕಾಯಕದ ಮೂರನೆಯ ಉಪಸಿದ್ಧಾಂತ ವೆಂದರೆ ಫಲಿತಾಂಶವನ್ನು ಅಳೆಯುವುದು ಉತ್ಪಾದನೆಯ ಪ್ರಮಾಣದಿಂದಲ್ಲ, ಅದರ ಮನೋಧರ್ಮದಿಂದ ಮತ್ತು ಕರ್ತೃವಿನಲ್ಲಿ ಅದು ಉಂಟುಮಾಡಿರುವ ಆಂತರಿಕ ಬೆಳವಣಿಗೆಯಿಂದ. ಬಾಹ್ಯಜಗತ್ತಿನಲ್ಲಿ ಹೆಚ್ಚು ಸ್ವಾತಂತ್ರ್ಯ ವಿರುತ್ತದೆ: ಆದ್ದರಿಂದ ಸಾಮಾನ್ಯ ವ್ಯಕ್ತಿ ಹೆಚ್ಚಿನ ಪರಿಮಾಣದ ಕೆಲಸ ಮಾಡಬಲ್ಲ; ಮಠದ ಬದುಕಿನಲ್ಲಾದರೋ ಬಾಹ್ಯ ಸ್ವಾತಂತ್ರ್ಯ ಹೆಚ್ಚಾಗಿರುವುದಿಲ್ಲವಾದ್ದರಿಂದ ದೊಡ್ಡ ಪರಿಮಾಣದಲ್ಲಿ ಅಥವಾ ಆಡಂಬರಯುತ ರೀತಿಯಲ್ಲಿ ಫಲಿತಾಂಶಗಳನ್ನು ಉಂಟುಮಾಡುವುದು ಸಾಧ್ಯವಾಗ ದಿರಬಹುದು. ಆದರೆ, ಆಧ್ಯಾತ್ಮಿಕ ದೃಷ್ಟಿಕೋನದಿಂದ ನಿಜ ವಾಗಿಯೂ ಮುಖ್ಯವಾದುದೆಂದರೆ, ಕಾಯಕವು ಕರ್ತೃ ವಿನಲ್ಲಿ ಉಂಟುಮಾಡುವ ಪರಿಶುದ್ಧಿ, ನಿಃಸ್ವಾರ್ಥ ಹೃದಯವಿಕಾಸ ಮತ್ತು ಇತರ ಆಂತರಿಕ ಪರಿವರ್ತನೆಗಳು.

ಬೆಂಗಳೂರಿನ ನನ್ನ ಆರಂಭದ ವರ್ಷಗಳ ಅವಧಿಯಲ್ಲಿ ಸಂನ್ಯಾಸ ಜೀವನದ ಬಗ್ಗೆ ನಾನು ಕಲಿತ ಪ್ರಮುಖ ಸತ್ಯಗಳಲ್ಲಿ ಒಂದೆಂದರೆ, ಆ ಜೀವನದ ಪರಿವರ್ತನ ಶಕ್ತಿ. ಕಾಯಕದ ಹಾಗೂ ಅದರ ಕ್ಲೇಶಗಳ ಮೂಲಕ, ಸತ್ಸಂಗದಿಂದ ಹಾಗೂ ಸ್ವಂತ ಆಂತರಿಕ ಹೋರಾಟಗಳ ಮೂಲಕ, ಹೊಸ ಶಿಷ್ಯನ ಆತ್ಮ ಅರಳುತ್ತದೆ. ಅವನ ಸ್ವಭಾವ, ನಡತೆ, ಧೋರಣೆಗಳು ಮತ್ತು ಇಡೀ ಬದುಕು ಮೂಲಭೂತ ಪರಿವರ್ತನೆಗೆ ಈಡಾಗುತ್ತದೆ. ನನ್ನಂಥ ಯುವಕನೊಬ್ಬ ಮಠಕ್ಕೆ ಸೇರಲು ಬಂದರೆ, ಅವನಲ್ಲಿ ಹಲವು ದೋಷ, ದೌರ್ಬಲ್ಯಗಳು ಮತ್ತು ಕೊರತೆಗಳು ಸಾಮಾನ್ಯ ವಾಗಿ ಕಂಡುಬರುತ್ತವೆ. ಆದರೆ ಕೆಲವೇ ವರ್ಷಗಳಲ್ಲಿ ಸಂನ್ಯಾಸ ಜೀವನದ ಯಂತ್ರ ಅವನನ್ನು ಪ್ರಭುವಿನ ಜಾಗರೂಕ, ದಕ್ಷ, ನಿಃಸ್ವಾರ್ಥ, ಆತ್ಮವಿಶ್ವಾಸಯುತ ಸೇವಕನನ್ನಾಗಿ, ಹೊಸ ಬದುಕಿನ ಹೊಣೆಗಳನ್ನು ನಿರ್ವಹಿಸಲು ಮತ್ತು ಸವಾಲುಗಳನ್ನು ಎದುರಿಸಲು ಸಮರ್ಥನನ್ನಾಗಿ ಪರಿವರ್ತಿಸುತ್ತದೆ.

ಅಂತಹ ಬದಲಾವಣೆಗಳು ಮಾನವ ವ್ಯಕ್ತಿತ್ವದ ನೇತ್ಯಾತ್ಮಕ ಮುಖದಲ್ಲಷ್ಟೇ ಅಲ್ಲ, ಸ್ವಾಮಿ ವಿವೇಕಾನಂದರು 'ಆತ್ಮದ ಸುಪ್ತ ಸಾಧ್ಯತೆ'ಗಳೆಂದು ವರ್ಣಿಸಿರುವ ಇತ್ಯಾತ್ಮಕ ಮುಖ ದಲ್ಲೂ ಸೊಗಸಾದ ಅವಕಾಶಗಳನ್ನು ಒದಗಿಸುತ್ತವೆ. ಸಂನ್ಯಾಸ ಜೀವನ ಮನುಷ್ಯನ ಅಧಃಪ್ರವೃತ್ತಿಗಳನ್ನು ತಗ್ಗಿಸುತ್ತದೆ, ಇಲ್ಲವೆ ನಿಯಂತ್ರಿಸುತ್ತದೆ ಮತ್ತು ಅವನನ್ನು ಪರಿಸರದ ಕೆಟ್ಟ ಪ್ರಭಾವ ಗಳಿಂದ ಪಾರುಮಾಡುತ್ತದೆ. ಉನ್ನತ ಸಾಧ್ಯತೆಗಳು ತೆರೆದು ಕೊಂಡು ವ್ಯಕ್ತಿತ್ವ ಅರಳಲು ಇದು ಆಸ್ಪದ ನೀಡುತ್ತದೆ.

**ರಾಮಕೃಷ್ಣ ಮಠದ ಅನನ್ಯತೆ**

ರಾಮಕೃಷ್ಣ ಮಠದ ಸಂನ್ಯಾಸ ಜೀವನದ ಅನನ್ಯತೆಯನ್ನು ಅರ್ಥಮಾಡಿಕೊಳ್ಳಬೇಕಾದರೆ, ಸಾಂಪ್ರದಾಯಿಕ ಹಿಂದೂ ಸಂನ್ಯಾಸ ಜೀವನದ ಪ್ರಕಾರಗಳನ್ನು ಅರ್ಥಮಾಡಿಕೊಳ್ಳಬೇಕು. ಸಾಂಪ್ರದಾಯಿಕ ಹಿಂದೂಧರ್ಮದಲ್ಲಿ ಮೂರುಬಗೆಯ ಸಂನ್ಯಾಸ ವ್ಯವಸ್ಥೆಗಳಿವೆ: ಆಶ್ರಮ, ಮಠ ಮತ್ತು ಅಖಾಡಾ. ಕೆಲವರು ವಿದ್ಯಾರ್ಥಿಗಳು ಒಬ್ಬ ಗುರುವಿನ ಸುತ್ತ ಒಟ್ಟು ಗೂಡುವ ತಾತ್ಕಾಲಿಕ ಸಂಸ್ಥೆ, ಆಶ್ರಮ. ಆಶ್ರಮಗಳಲ್ಲಿ ಪೂಜೆಗೆ ಖಾಯಂ ವ್ಯವಸ್ಥೆಯಿರುವುದಿಲ್ಲ. ಆಶ್ರಮಗಳು ಸಂನ್ಯಾಸಿಗಳಿಗೆ ಮಾತ್ರ ಎಂಬುದಿಲ್ಲ. ವಾಸ್ತವವಾಗಿ, ಪ್ರಾಚೀನ ಭಾರತದ ಆಶ್ರಮಗಳಲ್ಲಿ ವಾಸಿಸುತ್ತಿದ್ದ ಬಹು ಮಂದಿ ಋಷಿಗಳು ವಿವಾಹಿತರಾಗಿರುತ್ತಿದ್ದರು.

ಪೂಜೆಗೆ ಖಾಯಂ ವ್ಯವಸ್ಥೆಯಿರುವಂಥ ಖಾಯಂ ಸಂಸ್ಥೆ ಮಠ. ಶಂಕರರಿಂದ ಈಚೆಗೆ ರಾಮಾನುಜ, ಮಧ್ವರಿಂದ ಸ್ಥಾಪಿತವಾದ ಮಠಗಳಲ್ಲಿ ಒಬ್ಬರೇ ಯತಿ ವಾಸಮಾಡುತ್ತಾರೆ. ಅವರು ಕ್ಯಾಥೊಲಿಕ್ ಬಿಷಪ್‌ರಂತೆ ಕಾರ್ಯ ನಿರ್ವಹಿಸು ತ್ತಾರೆ.

ಅಖಾಡಾದಲ್ಲಿ ಬಹಳ ಮಂದಿ ಸಂನ್ಯಾಸಿಗಳು, ಸರಳವಾದ ಸಮುದಾಯವೊಂದರಲ್ಲಿ ಒಟ್ಟಿಗೆ ವಾಸಿಸುತ್ತಾರೆ. ಶಿವನಿಗೆ ಬೆಳಗುವ ಆರತಿಯ ವಿನಾ ಪೂಜೆಗೆ ಖಾಯಂ ವ್ಯವಸ್ಥೆ ಯಿರುವುದಿಲ್ಲ.

ರಾಮಕೃಷ್ಣ ಮಠದ ಸಂನ್ಯಾಸ ಸಂಸ್ಥೆಗಳು, ಮಠ ಅಥವಾ ಆಶ್ರಮಗಳೆನಿಸಿದ್ದರೂ, ಮೇಲೆ ಹೇಳಿರುವ ಸಂನ್ಯಾಸ ವಿನ್ಯಾಸ ಗಳಲ್ಲಿ ಯಾವೊಂದಕ್ಕೂ ಹೊಂದಿಕೊಳ್ಳುವುದಿಲ್ಲ. ದಿಟವಾಗಿ ಅವು ಎಲ್ಲ ಮೂರು ಸಂಸ್ಥೆಗಳ ಮತ್ತು ಇನ್ನೂ ಮಿಗಿ ಲಾದುದರ ಅತ್ಯುತ್ತಮ ಅಂಶಗಳನ್ನು ತಮ್ಮಲ್ಲಿ ಕೂಡಿಸಿ ಕೊಂಡಿವೆ. ಈ "ಇನ್ನೂ ಮಿಗಿಲಾದುದು" ಎರಡು ಸಂಗತಿ ಗಳನ್ನೊಳಗೊಳ್ಳುತ್ತದೆ: ಪೂಜೆಯಾಗಿ ಕಾಯಕ ಮತ್ತು ಸಮುದಾಯ ಜೀವನದ ಆಧಾರವಾಗಿ ಪ್ರೇಮ. ಇವುಗಳಲ್ಲಿ, ಪೂಜೆಯಾಗಿ ಕಾಯಕವನ್ನು ಹಿಂದೆಯೇ ಚರ್ಚಿಸಲಾಗಿದೆ.

ಸಾಂಪ್ರದಾಯಿಕ ಹಿಂದೂ (ಮತ್ತು ಬೌದ್ಧ, ಜೈನ)

ಸಂನ್ಯಾಸ ಸಂಸ್ಥೆಯಲ್ಲಿ ಸಮುದಾಯ ಜೀವನದ—ಅದು ಇದ್ದೆಡೆ—ಆಧಾರವೆಂದರೆ, ಪರಸ್ಪರ ಅನುಕೂಲ, ಸಮಾನ ಆದರ್ಶದ ಅನ್ವೇಷಣೆ ಮತ್ತು ಸಮಾನ ಪರಂಪರೆಯೊಂದಕ್ಕೆ ನಿಷ್ಠೆ. ರಾಮಕೃಷ್ಣ ಸಂನ್ಯಾಸ ಸಂಸ್ಥೆಯಲ್ಲಿ ಸಮುದಾಯ ಜೀವನದ ಆಧಾರವೆಂದರೆ ಪ್ರೇಮ; ಸಾಮಾನ್ಯ ಪ್ರೇಮವಲ್ಲ, ದೈವೀ ಪ್ರೇಮ. ಎಲ್ಲ ಸದಸ್ಯರನ್ನು ಒಟ್ಟಿಗೆ ಹಿಡಿದಿಟ್ಟಿರುವುದು ಸಂಘದ ಮೂಲಕ ಹರಿಯುವ ರಾಮಕೃಷ್ಣ, ಶ್ರೀಮಾತೆಯರ ಪ್ರೇಮ. ಈ ಐಕ್ಯಕಾರಕ ಶಕ್ತಿಯೊಂದು ಶಾಶ್ವತ, ಅವಿಚ್ಛಿನ್ನ ಬಂಧನ. ರಾಮಕೃಷ್ಣ ಸಂನ್ಯಾಸ ಸಂಸ್ಥೆಯ ಅತ್ಯಂತ ಅನನ್ಯ ಲಕ್ಷಣ ಇದೇ.

### ಪ್ರೇಮದ ದೈವೀಕರಣ

ಪ್ರೇಮ ಎರಡು ಬಗೆ: ಭಗವತ್‌ಪ್ರೇಮ ಮತ್ತು ಮಾನವ ಪ್ರೇಮ. ('ಮಾನವ' ಎಂಬುದನ್ನಿಲ್ಲಿ ವ್ಯಾಪಕಾರ್ಥದಲ್ಲಿ ಬಳಸಲಾಗಿದೆ; ಅದು ಸ್ತ್ರೀಯನ್ನೂ ಒಳಗೊಳ್ಳುತ್ತದೆ.) ಸಾಂಪ್ರದಾಯಿಕ ಹಿಂದೂ ಅಧ್ಯಾತ್ಮದಲ್ಲಿ, ಅದರಲ್ಲೂ ಸಂನ್ಯಾಸದಲ್ಲಿ, ಪ್ರೇಮದ ಈ ಎರಡು ಬಗೆಗಳು ಪರಸ್ಪರ ವಿರುದ್ಧವೆಂದು ಭಾವಿಸಲಾಗಿದೆ. ಮಾನವಪ್ರೇಮವನ್ನು ಯಾವಾಗಲೂ ಬಂಧನದ ಕಾರಣವೆಂದು ಬಗೆಯಲಾಗಿದೆ. ಬುದ್ಧ ಪ್ರೀತಿಯ ವಿರುದ್ಧ ಎಚ್ಚರಿಸಿದ; ಸದಾ ಮೈತ್ರಿಯನ್ನು ಪ್ರತಿಪಾದಿಸಿದ. ಬೃಹದಾರಣ್ಯಕ ಉಪನಿಷತ್ತು ಪ್ರೇಮದ ಎರಡು ಬಗೆಗಳ—ಭಗವತ್‌ಪ್ರೇಮ ಮತ್ತು ಮಾನವಪ್ರೇಮ—ಸಮಾನ ಭೂಮಿಕೆಯನ್ನು ತೋರಿಸಿಕೊಟ್ಟು ಅವುಗಳನ್ನು ಒಗ್ಗೂಡಿಸಲು ಯಾಜ್ಞವಲ್ಕ್ಯ-ಮೈತ್ರೇಯಿ ಸಂವಾದದ ಮೂಲಕ (೪.೫.೬) ಯತ್ನಿಸಿತು. ಆದರೆ ಈ ಉದಾತ್ತ ಪರಿಕಲ್ಪನೆ ಎಂದೂ ವ್ಯಾಪಕವಾಗಿ ಗಮನ ಸೆಳೆಯಲಿಲ್ಲ ಮತ್ತು ವ್ಯಾವಹಾರಿಕ ಜೀವನಕ್ಕೆ ಎಂದೂ ಅನ್ವಯಗೊಳ್ಳಲಿಲ್ಲ.

ಬೃಹದಾರಣ್ಯಕದ ಮೇಲಿನ ಸಂವಾದದ ನಿಜವಾದ ಅರ್ಥವನ್ನು ಪ್ರಕಟಿಸಿ, ಜನಪ್ರಿಯಗೊಳಿಸಿದವರು ಸ್ವಾಮಿ ವಿವೇಕಾನಂದರು. ಜೀವಾತ್ಮ, ಪರಮಾತ್ಮರ ಏಕತೆಯ ಆಧಾರದ ಮೇಲೆ ಭಗವತ್ ಪ್ರೇಮ, ಮಾನವಪ್ರೇಮಗಳನ್ನು, ದೇವರಾಗಿ ಮಾನವನ ಪೂಜೆಯ ಅವಿಭಾಜ್ಯ ಪರಿಕಲ್ಪನೆಯನ್ನಾಗಿ (**ಶಿವಜ್ಞಾನೇ ಜೀವಸೇವಾ**) ಏಕೀಕರಿಸಿದರು ಮತ್ತು ಅದನ್ನು ಸಾಮಾಜಿಕ ಸೇವೆಗಾಗಿ ಒಂದು ಸಶಕ್ತ ಉಪದೇಶವನ್ನಾಗಿ ಪರಿವರ್ತಿಸಿದರು. ಈ ಪರಿಕಲ್ಪನೆ ಎಲ್ಲ ಮಾನವ ಸಂಬಂಧಗಳನ್ನೂ ದೈವೀಕರಿಸಿತು. ಅದು ಶ್ರೀರಾಮಕೃಷ್ಣರಿಂದ ಉಗಮಗೊಂಡದ್ದೇನೋ ನಿಜವಾದರೂ ಅದನ್ನು ತಮ್ಮ ಸ್ವಂತ ಬದುಕಿನಲ್ಲಿ ಅನುಷ್ಠಾನಗೊಳಿಸಿ, ಆ ಮೂಲಕ ಅದಕ್ಕೊಂದು ಸಾಮಾಜಿಕ ವಾಸ್ತವಿಕತೆಯನ್ನಿತ್ತದ್ದು ಶ್ರೀರಾಮಕೃಷ್ಣರ ಪ್ರಮುಖ ಪಾತ್ರ. ತಮ್ಮ ಸ್ವಂತ ಪತ್ನಿಯನ್ನೇ ಪೂಜಿಸುವ ಮೂಲಕ ಶ್ರೀರಾಮಕೃಷ್ಣರು ಕುಟುಂಬಸಂಬಂಧಗಳನ್ನು ದೈವೀಕರಿಸಿದರು ಮತ್ತು ಸ್ವಂತ ಶಿಷ್ಯರನ್ನು ನಾರಾಯಣರೂಪಿಗಳನ್ನಾಗಿ ಪರಿಗಣಿಸುವ ಮೂಲಕ ಗುರು-ಶಿಷ್ಯ ಸಂಬಂಧಗಳನ್ನು ದೈವೀಕರಿಸಿದರು. ಸ್ವಾಮಿಜಿ ಈ ಕಲ್ಪನೆಯನ್ನು ದರಿದ್ರರ ಮತ್ತು ದಲಿತರ ಬಗೆಗಿನ ಧೋರಣೆಯ ದೈವೀಕರಣವಾಗಿ ವಿಸ್ತರಿಸಿದರು.

ರಾಮಕೃಷ್ಣ ಮಠದ ಸಂನ್ಯಾಸ ಸಂಸ್ಥೆಗಳ ಸಮುದಾಯ ಜೀವನದ ತಳಹದಿಯಲ್ಲಿರುವುದು ದಿವ್ಯಪ್ರೇಮವಾಗಿ ಮಾನವ ಪ್ರೇಮದ ಈ ಕಲ್ಪನೆಯೆ. ಸಂನ್ಯಾಸಿ ಸೋದರರ ಸಂಬಂಧ ಭೌತಿಕ ಸ್ತರದ್ದಲ್ಲ, ಆಧ್ಯಾತ್ಮಿಕ ಸ್ತರದ್ದು. ಆತ್ಮನ ಏಕತೆಯ ಭಾವನೆಯೇ ರಾಮಕೃಷ್ಣ ಮಠದ ಸಂನ್ಯಾಸಿಗಳ ಐಕ್ಯಸೂತ್ರ. ಮಾನವ ಸಂಬಂಧಗಳ ಇಂತಹ ಅರಿವು ಬಂಧನವನ್ನುಂಟುಮಾಡುವುದಿಲ್ಲ. ಬದಲಿಗೆ, ಅದು ಸಂನ್ಯಾಸ ಸಂಬಂಧಗಳನ್ನು ಶುದ್ಧೀಕರಿಸುತ್ತದೆ, ಉದಾತ್ತೀಕರಿಸುತ್ತದೆ ಮತ್ತು ಶಕ್ತಗೊಳಿಸುತ್ತದೆ. ಎಲ್ಲ ಸಂನ್ಯಾಸಿಗಳೂ ಶ್ರೀರಾಮಕೃಷ್ಣ, ಶ್ರೀಮಾತೆಯರ ಮಕ್ಕಳೆಂಬ ಭಾವನೆ ಇದರ ಮೇಲೆ ನಿಂತಿದೆ. ಇದೆಲ್ಲವೂ ರಾಮಕೃಷ್ಣ ಚಳವಳಿಗೆ ಸಂನ್ಯಾಸಜೀವನದ ಅತ್ಯಂತ ಉನ್ನತ, ಉದಾತ್ತ ಹಾಗೂ ಶಕ್ತಿಯುತ ಆದರ್ಶವನ್ನು ನೀಡಿದೆ. ಈ ಆದರ್ಶವು ಈಗ ಭಾರತದಲ್ಲಿ ಸಂನ್ಯಾಸದ ಪುನರುಜ್ಜೀವನವನ್ನು ಹದಗೊಳಿಸುತ್ತಿದೆ. ಪ್ರಪಂಚದ ಅನೇಕ ಭಾಗಗಳಲ್ಲಿ, ಭಾರತದಲ್ಲಿ ಕೂಡ, ಸಂನ್ಯಾಸವೆಂಬ ಸಂಸ್ಥೆ ಅಥವಾ ವ್ಯವಸ್ಥೆ ದುರ್ಬಲಗೊಳ್ಳುತ್ತಿರುವಾಗ, ರಾಮಕೃಷ್ಣ ಮಠವು ಅದರ ಪುನರುತ್ಥಾನದಲ್ಲಿ ಹೋರಾಟದ ಮುಂಚೂಣಿಯಲ್ಲಿದೆ; ಮುಂದಿನ ಶತಮಾನಗಳಲ್ಲಿ ಅದೊಂದು ಆಧ್ಯಾತ್ಮೀಕರಣ ಶಕ್ತಿಯಾಗಿ ಪರಿಣಮಿಸಲೇಬೇಕು.

ಪ್ರೇಮದ ಈ ದೈವೀಕರಣದ ಪರಿಕಲ್ಪನೆಯನ್ನು ನಾನು ಪೂಜ್ಯ ಸ್ವಾಮಿ ಯತೀಶ್ವರಾನಂದಜಿ ಮಹಾರಾಜ್ ಅವರಿಂದ ಪಡೆದೆ. ಅತ್ಯುನ್ನತವಾದುದೇನನ್ನು ಅವರಿಂದ ನಾನು ಕಲಿತೆ ಎಂದು ಕೇಳಿದರೆ, 'ಪ್ರೇಮ' ಎಂದು ಅಳುಕದೆ ಉತ್ತರಿಸುತ್ತೇನೆ. ಆಸಕ್ತಿ, ಬಂಧನಗಳನ್ನುಂಟುಮಾಡದೆ ಇತರರನ್ನು ಪ್ರೀತಿಸುವುದು ಹೇಗೆಂಬುದನ್ನು ಅವರು ನನಗೆ ಕಲಿಸಿದರು. ಎಲ್ಲ ಸಂಬಂಧಗಳನ್ನೂ ಆಧ್ಯಾತ್ಮಿಕ ಸ್ತರದಲ್ಲಿ ಸ್ಥಾಪಿಸುವುದು ಹೇಗೆ, ಶ್ರೀರಾಮಕೃಷ್ಣ ಮತ್ತು ಶ್ರೀಮಾತೆಯರ ಮೂಲಕ ಎಲ್ಲರನ್ನೂ ಪ್ರೀತಿಸುವುದು ಹೇಗೆ, ಈ ಪ್ರೀತಿಯನ್ನು ಆಧ್ಯಾತ್ಮಿಕ ಸಾಧನೆಗೆ ವಿಘ್ನವಾಗದಂತೆ ನೆರವನ್ನಾಗಿ ಪರಿವರ್ತಿಸುವುದು ಹೇಗೆ ಎಂಬುದನ್ನು ನಮಗವರು ಕಲಿಸಿದರು. ಮುಕ್ತಿಗೆ ಸಾಮೂಹಿಕ ಪ್ರಯತ್ನದ ಪರಿಕಲ್ಪನೆಯನ್ನು ತಿಳಿಸಿಕೊಟ್ಟವರೂ ಅವರೇ. ಅವರು ಮತ್ತೆ ಮತ್ತೆ ಹೇಳುತ್ತಿದ್ದರು: "ನನಗೆ ಮುಕ್ತಿ ಬೇಕು; ಹೌದು, ಆದರೆ ಇತರರೊಡನೆ ನಾನು ಮುಕ್ತಿ ಪಡೆಯಬಯಸುತ್ತೇನೆ."

(ಮುಂದುವರೆಯುವುದು)